ಬಂದ ಎರಡೇ ದಿನಗಳಲ್ಲಿ ನಾನಲ್ಲಿ ಅನಪೇಕ್ಷಿತ ಅತಿಥಿಯಾಗಿದ್ದೆ ಎನ್ನುವುದು ಗೊತ್ತಾಗಿ ಹೋಯಿತು. ನನ್ನ ನಿಜವಾದ ಕಷ್ಟದ ದಿನಗಳು ಆರಂಭವಾಗಿದ್ದವು. ನನ್ನೂರಿನಲ್ಲಿ ಬಡತನದ ಕಾರಣ ಪೈಸೆಪೈಸೆಗೂ ಲೆಕ್ಕ. ಆದರೆ ಹೊಟ್ಟೆ ತುಂಬ ಊಟ. ಒತ್ತಾಯ ಮಾಡಿ ತಿನಿಸುತ್ತಿದ್ದಳು ಅವ್ವ. ಆದರೆ ಇಲ್ಲಿ ಅದಕ್ಕೇ ತತ್ವಾರ. ಕಾಕೂಗೆ ನನ್ನ ಬಗ್ಗೆ ಅದೆಷ್ಟು ತಾತ್ಸಾರವೋ... ಅವರಿಬ್ಬರಿಗೂ ಬಿಟ್ಟಿ ಆಳು ದೊರೆತಂತಾಗಿತ್ತು. ನಾನೇನು ಕೆಲಸಕ್ಕೆ ಅಂಜುವ ಆಸಾಮಿಯಲ್ಲ. ಆದರೆ ಹೊಟ್ಟೆಗೆ ಬೇಕಲ್ಲ... ಅಜಯ ಬೆಳಿಗ್ಗೆ ಎಂಜಿನಿಯರಿಂಗ್ ಕಾಲೇಜಿಗೆ ಹೋಗುವಾಗ ಅವನಿಗೆ ಡಬ್ಬಿ ಕಟ್ಟುತ್ತಿದ್ದು ಅದರಲ್ಲಿ ಎರಡು ಚಿಕ್ಕ ಚಪಾತಿಗಳು ನನ್ನ ಡಬ್ಬಿ ಸೇರುತ್ತಿದ್ದವು. ಅವನಿಗೆ ರಜೆ ಇದ್ದ ದಿನ ನನ್ನ ಹೊಟ್ಟೆಗೂ ರಜೆಯೇ. ಸಂಜೆ ಮನೆಗೆ ಮರಳಿದಾಗ ಅವರೆಲ್ಲ ಹೋಟೆಲ್‌ನಲ್ಲಿ ಏನಾದರೂ ತಿಂದು ಬಂದಿರುತ್ತಿದ್ದರು. ಕಾಕು, “ಇದ್ದದ್ದರಲ್ಲೇ ಸಮಾರಿಸಿ ಬಿಡೋಣು” ಎನ್ನುತ್ತ ಪ್ಲೇಟಿಗೆ ತುತ್ತು ಅನ್ನ, ಮೊಸರು ಹಾಕಿದಾಗ ಕಣ್ತುಂಬಿ ಬರುತ್ತಿತ್ತು. ರಾತ್ರಿ ಮೆತ್ತಗೆ ಎದ್ದು ಅವ್ವ ಕೊಟ್ಟ ಅವಲಕ್ಕಿಯನ್ನು ತಿನ್ನುವಾಗ ಮನೆಗೆ ಓಡಿಹೋಗಲೇ ಎನಿಸಿದ್ದೆಷ್ಟೋ ಬಾರಿ. ತಕ್ಷಣ ಒಳ್ಳೆಯ ಕಾಲೇಜಿನಲ್ಲಿ ಸೀಟು ದೊರೆತು ಅದಕ್ಕೆ ಅಪ್ಪ ಫೀಸು ಕೊಟ್ಟ ನೆನಪಾಗಿ ಸುಮ್ಮನಾಗುತ್ತಿದ್ದೆ. ಅಪ್ಪನಿಗೆ ಒಂದಾದರ ಮೇಲೊಂದು ಹೊಡೆತಗಳು. ಪಾಲಾದ ನಂತರ ಯಮುನಾಳ ಮದುವೆ, ಅವಳ ಬಾಣಂತನ, ನನ್ನ ಓದು – ಸಾಲ ತೀರಿಸಲು ಅವಕಾಶವೇ ಇಲ್ಲ. ಎಲ್ಲಿಂದ ಹೇಗೆ ಹೊಂದಿಸಿದರೋ ದುಡ್ಡು... ಒಟ್ಟಿನಲ್ಲಿ ನೀರು, ಉಂಡಿ, ಅವಲಕ್ಕಿಯ ಮೇಲೇ ಕೆಲದಿನ ಬದುಕಿದ್ದು ನಿಜ.

ಒಂದು ರಾತ್ರಿ ಹೀಗೆ ಅವಲಕ್ಕಿ ತಿನ್ನುತ್ತಿದ್ದುದನ್ನು ಕಾಕಾ ನೋಡಿಬಿಟ್ಟರು. ಅವರಿಗೂ ಸಂಕಟವಾಯಿತು. ಬ್ರೆಡ್ ಕೊಟ್ಟು ತಿನ್ನಲು ಹೇಳಿ ಬೆನ್ನು ಸವರಿ ಹೋದರು. ಮರುದಿನ ಬೆಳಿಗ್ಗೆ ನಾನು ಕಾಲೇಜಿಗೆ ಹೋಗುವಾಗ ತಿರುವಿನಲ್ಲಿ ಕಾದಿದ್ದವರು ಒಂದೆರೆಡು ಬೀದಿಗಳಾಚೆ ಸುಮಾರಾಗಿ ಕೊಳೆಗೇರಿ ಎನ್ನಬಹುದಾದ ಏರಿಯಾದಲ್ಲಿದ್ದ ಒಂದು ಚಿಕ್ಕ ಹೋಟೆಲನ್ನು ನನಗೆ ಪರಿಚಯಿಸಿದರು. “ಇಂವ ಬಸು. ನಮ್ಮ ಊರಾಂವ. ಭಕ್ಕರಿ, ಚಪಾತಿ, ಪಲ್ಯ ಮಾಡತಾನ. ಬೇಕಾದಾಗ ಬೇಕಾದಷ್ಟು ತಿನ್ನು. ನಿಮ್ಮ ಕಾಕೂನ ವಿಚಾರ ಬಿಟ್ಟು ಛೋಲೊತ್ನಾಗಿ ಓದು” ಎಂದು ನನಗೆ ಹೇಳಿದ್ದಲ್ಲದೇ, “ಇಂವಗ ಏನ ಬೇಕೋ ಕೊಡಪಾ. ಲೆಕ್ಕಾ ಬರಕೊ. ನಾ ಬಂದು ಕೊಟ್ಟ ಹೋಗ್ತೇನಿ” ಎಂದು ನನ್ನ ಕೈಯಲ್ಲೂ ಕೆಲವು ನೋಟುಗಳನ್ನಿಟ್ಟರು. ನಾನೂ ಬೇಡವೆನ್ನಲಿಲ್ಲ. ಇದ್ದು ಜೈಸಬೇಕಿತ್ತಲ್ಲ. ನಂತರ ಕ್ರಮೇಣ ಬಸು ಆಪ್ತ ಗೆಳೆಯನಾದ. ಅವ್ವ ಕಟ್ಟಿಕೊಡುವ ಕಾರದ ಪುಡಿ, ಜೋಳದ ಹಿಟ್ಟು ಅವನಿಗೆ ಕೊಟ್ಟು ನಿತ್ಯ ಹೋಗುವಾಗ ಎರಡು ಭಕ್ಕರಿ ತಿಂದು ಎರಡು ಕಟ್ಟಿಕೊಂಡೇ ಹೊರಡುತ್ತಿದ್ದೆ. ಬರುವಾಗಲೂ ಅವನಲ್ಲಿ ತಿಂದು ಬಂದು ಕಾಕೂನ ಪುಟ್ಟ ಪ್ಲೇಟಿಗೆ, “ಸಾಕು ಕಾಕು. ಭಾಳಾತು” ಎನ್ನುವುದು ಕಲಿತೆ. ತಂಗಳು ಉಳಿದಾಗ ಹೊಟ್ಟೆ ತುಂಬ ಬಡಿಸಿ ಕಾಕು, “ಛೋಲೊತ್ನಾಗಿ ತಿನ್ನಪಾ. ಸೊರಗಿ ಕಾಕು ಊಟಕ್ಕ ಹಾಕ್ತಾಳಿಲ್ಲೋ ಅನಸಬ್ಯಾಡಾ...” ಎನ್ನುತ್ತಿದ್ದರು. ಅಜಯ ಎಷ್ಟೋ ಬಾರಿ ಕಟ್ಟಿದ ಕ್ಯಾರಿಯರ್ ದಾರಿಯಲ್ಲಿ ನನಗೆ ಕೊಡುತ್ತಿದ್ದ ಇಲ್ಲವೇ ತಿಪ್ಪೆಗೆ ಸುರಿದು ಹೊರಗೆ ತಿನ್ನುತ್ತಿದ್ದುದನ್ನು ನೋಡಿ ಸಂಕಟವಾದರೂ ಸುಮ್ಮನಿರುತ್ತಿದ್ದೆ.

ಕಾಲದ ಚಕ್ರ ತಿರುಗುತ್ತಿದ್ದಂತೆ ನಾನು ಬೆಂಗಳೂರಿಗೆ ಹೊಂದಿಕೊಂಡೆ. ಮನೆಗೂ ಸಹ... ಎನ್ನಬೇಕು. ಅವರಂತೆಯೇ ಇರಲು ಕಲಿತೆ. ಕಾಲೇಜಿನಲ್ಲಿ ಜಾಣನೆನಿಸಿಕೊಂಡೆ. ನನ್ನದಲ್ಲದೇ ಅಜಯನ ಪುಸ್ತಕಗಳನ್ನೂ ಓದುತ್ತಿದ್ದೆ. ಆದರೆ ಕಾಕಾನಿಗೆ ಆಫೀಸಿನಲ್ಲಿ ಏನೋ